ಇ) ಬಿಜಾಪುರ ಜಿಲ್ಲೆಯಲ್ಲಿ ಡಿ.ಪಿ..ಪಿ. ಕಾರ್ಯಕ್ರಮ ಅಕ್ಟೋಬರ್ 97ರಲ್ಲಿ ಪ್ರಾರಂಭವಾಗಿದ್ದು 1997-98ನೇ ಸಾಲಿನಲ್ಲಿ 58.23 ಶೇಕಡ ಗುರಿ ಸಾಧಿಸಲಾಗಿದೆ. 1998-99ನೇ ಸಾಲಿನಲ್ಲಿ ಫೆಬ್ರವರಿ 99ರ ಅಂತ್ಯದವರಿಗೆ 54.81 ಶೇಕಡ ಗುರಿ ಸಾಧನೆಯಾಗಿದ್ದು ಮಾರ್ಚಿ 99ರ ಒಳಗೆ ಇನ್ನೂ ಹೆಚ್ಚಿನ ಪ್ರಗತಿಯನ್ನು ನಿರೀಕ್ಷಿಸಲಾಗಿದೆ.

ಈ) ಸಿವಿಲ್ ಕಾಮಗಾರಿಗಳ ನಿರ್ಮಾಣವು ವಿವಿದ ಹಂತಗಳಲ್ಲಿವೆ. ವಿವಿಧ ಹಂತದ ನಿರ್ಮಾಣದ ಪರಿಶೀಲನೆಗೊಳಪಟ್ಟು ಕಾಮಗಾರಿಯ ಕೆಲಸಕ್ಕೆ ಕಂತಿನ ರೂಪದಲ್ಲಿ ಹಣ ಪಾವತಿಸಲಾಗುತ್ತಿದೆ. ಅತಿ ಶೀಘ್ರದಲ್ಲಿಯೇ ಹೆಚ್ಚಿನ ಕಟ್ಟಡಗಳ ನಿರ್ಮಾಣ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ

361 (828) ಶ್ರೀ ಕೆ.ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲವು ತಿಂಗಳಿನಿಂದೀಚೆಗೆ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಇಲ್ಲಿ ಶಸ್ತ್ರ ಚಿಕಿತ್ಸೆ ನಡೆಸಲು ಸೂಕ್ತ ಕ್ರಮವನ್ನು ಸರ್ಕಾರವು ತೆಗೆದುಕೊಳ್ಳಲಿದೆಯೇ ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಹೌದು, ಸಂತಾನಹರಣ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಲಾಗುವುದು.

ಬೈಂದೂರಿಗೆ ಪ್ರತ್ಯೇಕ ವಲಯ ಶಿಕ್ಷಣಾಧಿಕಾರಿಗಳ ಕಛೇರಿ

362 (829) ಶ್ರೀ ಕೆ.ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ವಲಯ ಶಿಕ್ಷಣಾಧಿಕಾರಿಗಳ ಕಛೇರಿ ವ್ಯಾಪ್ತಿಗೊಳಪಟ್ಟು ಕಛೇರಿ ಕೆಲಸಗಳ ಒತ್ತಡ ತುಂಬಾ ಇರುವುದರಿಂದ ಬೈಂದೂರಿಗೆ ಪ್ರತ್ಯೇಕ ವಲಯ ಶಿಕ್ಷಣಾಧಿಕಾರಿಗಳ ಕಛೇರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ)ಇದಕ್ಕಿಂತಲೂ ಕಡಿಮೆ ಒತ್ತಡವಿದ್ದ ಉಡುಪಿ ವಲಯವನ್ನು ಹಿಂದೆ ಉಡುಪಿ ಬ್ರಹ್ಮಾವರ ವಲಯಗಳಾಗಿ ವಿಭಜನೆ ಮಾಡಿರುವುದು ನಿಜವೆ : ಹಾಗಿದ್ದಲ್ಲಿ ಅದರಂತೆ ಬೈಂದೂರಿನಲ್ಲಿ ಪ್ರತ್ಯೇಕ ವಲಯ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ತೆರೆಯಲಾಗುವುದೇ ?

ಶ್ರೀ ಹೆಚ್.ಜಿ.ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ)ಹೌದು. ಬಂದಿದೆ.